(ರೂ. ಲಕ್ಷಗಳಲ್ಲಿ)

		ಮೀ.ಹಣ	ಖರ್ಚು
	ಚಿಕ್ಕಮಗಳೂರು ತಾಲ್ಲೂಕು		
1.	ಬಾಬಾ ಬುಡನ್‌ಗಿರಿ ಶೌಚಾಲಯ	12.45	12.45
2.	ಚಿಕ್ಕಮಗಳೂರು ರಸ್ತೆ ಬದಿ ಸೌಲಭ್ಯ	75.58	75.58
	ಶೃಂಗೇರಿ ತಾಲ್ಲೂಕು		
1.	ಶೃಂಗೇರಿ ಉಪಹಾರ ಮತ್ತು ವಿಶ್ರಾಂತಿ ಗೃಹ	20.96	20.96
2.	ಶೃಂಗೇರಿ ಯಾತ್ರಿ ನಿವಾಸ	40.52	40.52
3.	ಶೃಂಗೇರಿ ಶೌಚಾಲಯ	5.14	5.00
	ಮೂಡಿಗೆರೆ ತಾಲ್ಲೂಕು		
1.	ಕುದುರೆಮುಖ ಪ್ರವಾಸಿ ಸಂಕೀರ್ಣ	37.50	ಕೆಲಸ ಪ್ರಾರಂಭವಾಗಬೇಕಾಗಿರುತ್ತದೆ.

ಇ) ಕೇಂದ್ರ ಸರ್ಕಾರ ಆಯ್ಕೆ ಮಾಡುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುವುದು. 1998-99ನೇ ಸಾಲಿನಲ್ಲಿ ಪ್ರಿಯಾರಿಟೈಸೇಷನ್ ಕಮಿಟಿಯ ಸಭೆ ಇನ್ನೂ ಆಗಿರುವುದಿಲ್ಲ. ಸದರಿ ಸಭೆಯಲ್ಲಿ ರಾಜ್ಯ ಸರ್ಕಾರವು ಹಲವಾರು ಯೋಜನೆಗಳನ್ನು ಮಂಡಿಸುವುದು.

ಭದ್ರಾ ಅಭಯಾರಣ್ಯ ವನ್ಯಜೀವಿ ಪುನರ್‌ವಸತಿ ಯೋಜನೆ

834 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಭದ್ರಾ ಅಭಯಾರಣ್ಯ ವನ್ಯಜೀವಿ ಪುನರ್ ವಸತಿ ಯೋಜನೆ ಜಾರಿಯಲ್ಲಿದೆಯೇ?

ಆ) ಈ ಯೋಜನೆಗಾಗಿ ತಗಲುವ ಅಂದಾಜು ವೆಚ್ಚ ಎಷ್ಟು?

ಇ) ಈ ಯೋಜನೆಗಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನವೆಷ್ಟು ಮತ್ತು ಕೇಂದ್ರ ಸರ್ಕಾರದಿಂದ ಈ ಯೋಜನೆಗಾಗಿ ಹಣ ಬಿಡುಗಡೆಯಾಗಿದೆಯೇ?

ಈ) ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗದಿದ್ದಲ್ಲಿ ರಾಜ್ಯ ಸರ್ಕಾರವು ತಮ್ಮ ಪಾಲಿನ ಹಣ ಬಿಡುಗಡೆ ಮಾಡುವ ಬಗ್ಗೆ ಆಲೋಚಿಸಿದೆಯೇ?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಹೌದು.

ಆ) ರೂ. 12.76 ಕೋಟಿಗಳು

ಇ) ಕೇಂದ್ರ ಸರ್ಕಾರದ ಪಾಲು 7.02 ಕೋಟಿ ರೂ.ಗಳು ರಾಜ್ಯ ಸರ್ಕಾರದ ಪಾಲು 5.74 ಕೋಟಿ ರೂ.ಗಳು. ಕೇಂದ್ರ ಸರ್ಕಾರದಿಂದ 1.68 ಕೋಟಿ ರೂ.ಗಳು ಬಿಡುಗಡೆಯಾಗಿರುತ್ತದೆ.

ಈ) ಕೇಂದ್ರ ಸರ್ಕಾರವು ಈಗಾಗಲೇ ತನ್ನ ಪಾಲಿನ ಅನುದಾನದಲ್ಲಿ ಸ್ವಲ್ಪ ಭಾಗವನ್ನು ಬಿಡುಗಡೆ ಮಾಡಿರುತ್ತದೆ. ರಾಜ್ಯ ಸರ್ಕಾರವು ಮೊದಲ ಕಂತಿನಲ್ಲಿ ರೂ. 20.00 ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಂಡಿದೆ.

ಚಿಕ್ಕಮಗಳೂರು ಅರಣ್ಯ ರಕ್ಷಣೆ

835 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಕಬ್ಬಿಣದ ಕಾರ್ಖಾನೆಗೆ ಗಣಿಗಾರಿಕೆಗಾಗಿ ಗಂಗಡಿ ಕಲ್ಲು ಮತ್ತು ನೆಲ್ಲಿಬೀಡು ಗ್ರಾಮಗಳಲ್ಲಿ 10 ಸಾವಿರ ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರ ತೀರ್ಮಾನಿಸಿದೆಯೇ?

ಆ) ಗುತ್ತಿಗೆ ಆಧಾರದ ಮೇಲೆ ನೀಡುವಂತಹ ಜಮೀನಿನಲ್ಲಿ ದಟ್ಟ ಅರಣ್ಯ ಇದೆಯೇ? ಇದರಿಂದ ಅರಣ್ಯ ಮತ್ತು ಪರಿಸರಕ್ಕೆ ಧಕ್ಕೆ ಉಂಟಾಗುವುದಿಲ್ಲವೆ?

ಇ) ಅರಣ್ಯ ಮತ್ತು ಪರಿಸರವನ್ನು ಉಳಿಸುವ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವೇನು?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1980ರ ಅರಣ್ಯ (ಸಂರಕ್ಷಣಾ) ಕಾಯಿದೆಗಳ ಪ್ರಕಾರ ಅರಣ್ಯ ಪ್ರದೇಶದಲ್ಲಿ ಭಾರತ ಸರ್ಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಪ್ರದೇಶದ ಗಣಿ ಗುತ್ತಿಗೆಗೆ ನೀಡುವಂತಿಲ್ಲ. ಈ ಕಾಯಿದೆಗಳ ಪ್ರಕಾರ ಕೇಂದ್ರ ಸರ್ಕಾರವು ಅನುಮೋದನೆ ನೀಡುವಾಗ ಅರಣ್ಯ ಮತ್ತು ಪರಿಸರದ ಹಿತದೃಷ್ಟಿಯಿಂದ ಕೆಲವೊಂದು ಷರತ್ತುಗಳನ್ನು ವಿಧಿಸುತ್ತದೆ ಮತ್ತು ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ.